# ಐಸ್‌ಕ್ರೀಂ ಕೂಲ್ ಸಂಗತಿಗಳು...

ಬೇಸಿಗೆ ಬಂತೆಂದರೆ ಐಸ್‌ಕ್ರೀಂ ನೆನಪಾಗದೇ ಇರುವುದುಂಟೆ? ಬಿಸಿಲ ಧಗೆಯಲ್ಲಿ ಮೈ ಮನಸ್ಸನ್ನು ತಣಿಸುವ ಐಸ್‌ಕ್ರೀಂ ಕುರಿತ ಕೆಲವು ಕೂಲ್ ವಿಷಯಗಳು...

ವಿಶ್ವದಲ್ಲೇ ವೆನಿಲ್ಲಾ ಅತಿ ಜನಪ್ರಿಯ ಫ್ಲೇವರ್ ಹಾಗೂ ಅತಿ ಹೆಚ್ಚು ಸೇವಿಸುವ ಫ್ಲೇವರ್ ಎಂದೂ ಹೆಸರು ಮಾಡಿದೆ.







ಐಸ್‌ಕ್ರೀಂ ಮೊದಲು ಆವಿಷ್ಕಾರಗೊಂಡಿದ್ದು ಚೀನಾದಲ್ಲಿ ಎನ್ನುತ್ತವೆ ಮೂಲಗಳು. ನಂತರ ಇಟಲಿಗೆ ಮಾರ್ಕೊಪೋಲೊ ಐಸ್‌ಕ್ರೀಂ ಪರಿಚಯಿಸಿದ್ದು, ಕ್ಯಾಥೆರಿನ್ ಡಿ ಮೆಡಿಸಿ ಎಂಬಾತ ಫ್ರಾನ್ಸ್‌ಗೆ ಐಸ್‌ಕ್ರೀಂ ರುಚಿಯನ್ನು ತೋರಿದ. ಥಾಮಸ್ ಜೆಫರ್ಸನ್‌ಗೆ ಅಮೆರಿಕಕ್ಕೆ ಐಸ್‌ಕ್ರೀಂ ಪರಿಚಯಿಸಿದ ಖ್ಯಾತಿ ಸಂದಿದೆ.

1984ರಲ್ಲಿ ಅಮೆರಿಕ ಅಧ್ಯಕ್ಷ ರೊನಾಲ್ಡ್ ರೇಗನ್ ಜುಲೈ ಅನ್ನು 'ರಾಷ್ಟ್ರೀಯ ಐಸ್‌ಕ್ರೀಂ ಮಾಸ' ಎಂದು ಘೋಷಣೆ ಮಾಡಿದರು.





ಒಬ್ಬ ವ್ಯಕ್ತಿ ಒಂದು ಸ್ಕೂಪ್ ಐಸ್‌ಕ್ರೀಂ ತಿನ್ನಲು ಸರಾಸರಿ 50 ಬಾರಿ ನೆಕ್ಕುತ್ತಾನೆ.



1904ರಲ್ಲಿ ಐಸ್‌ಕ್ರೀಂ ತಿನ್ನಲು ಕೋನ್ ಪರಿಚಯಿಸಲಾಯಿತು. ಅಮೆರಿಕದ ಮಿಸ್ಸೋರಿಯಲ್ಲಿನ ಸೇಂಟ್ ಲೂಯಿಸ್‌ನ ಉತ್ಸವದಲ್ಲಿ ವ್ಯಾಪಾರಿಯೊಬ್ಬ ಐಸ್‌ಕ್ರೀಂ ಮಾರಾಟ ಮಾಡುವಾಗ ಐಸ್‌ಕ್ರೀಂಗೆ ಬೇಡಿಕೆ ಹೆಚ್ಚಾಗಿ ಕಪ್‌ಗಳು ಖಾಲಿಯಾದವು. ಆಗ ವೇಫಲ್ ವ್ಯಾಪಾರಿಯೊಬ್ಬ ಪೇಸ್ಟ್ರಿ ಬಳಸಿ ಕೋನ್‌ಗಳಂತೆ ಮಾಡಿಕೊಟ್ಟ. ಆನಂತರ 'ಕೋನ್ ಐಸ್‌ಕ್ರೀಂ' ಎಂದೇ ಇದು ಪ್ರಚಲಿತವಾಯಿತು.

ತಣ್ಣನೆಯ ವಸ್ತುವು ಬಾಯಿಯ ಮೇಲ್ಭಾಗವನ್ನು ಸ್ಪರ್ಶಿಸಿದಾಗ ಬಾಯಿ ಹಾಗೂ ಮೆದುಳಿನ ನಡುವೆ ಚಲಿಸುವ ರಕ್ತನಾಳಗಳು ಉದ್ವಿಗ್ನಗೊಳ್ಳುತ್ತವೆ. ಮೆದುಳಿನಲ್ಲಿ ರಕ್ತವನ್ನು ಹಿಡಿದಿಟ್ಟುಕೊಳ್ಳುತ್ತವೆ. ಹೆಚ್ಚುವರಿ ರಕ್ತದ ಒತ್ತಡವು ಮೆದುಳಿನಲ್ಲಿ ನೋವನ್ನು ಉಂಟು ಮಾಡುತ್ತದೆ. ಈ ಕಾರಣಕ್ಕೇ ಐಸ್‌ಕ್ರೀಂ ತಿನ್ನುವಾಗ ಕೆಲವರಿಗೆ ತಲೆನೋವು ಕಾಣಿಸಿಕೊಳ್ಳುತ್ತದೆ.

